ಕಣ್ಣು ತಪ್ಪಿಸಿ ಕೆಲಸ ಮಾಡಿಸಿಕೊಂಡವರೂ ಇದ್ದಾರೆ. ಆದ್ದರಿಂದ ಶಸ್ತ್ರಚಿಕಿತ್ಸೆಗೊಳಗಾಗುವ ಮುನ್ನ ಚೀನಾದ ಕೆಲವು ನಗರಗಳ ಆಸ್ಪತ್ರೆಗಳಲ್ಲಿ ಮದುವೆ ಪ್ರಮಾಣಪತ್ರ ಇಲ್ಲವೇ ಹೆಂಡತಿಯ ಅನುಮತಿ ಪತ್ರ ತೋರಿಸುವಂತೆ ಕಟ್ಟುನಿಟ್ಟು ಮಾಡಿದ್ದಾರೆ. ದಂಪತಿಯಿಬ್ಬರೂ ಕೆಲಸ ಮಾಡುವ ಕುಟುಂಬಗಳಲ್ಲಿ 'ಡಬಲ್ ಇನ್‌ಕಂ, ನೋ ಚಿಲ್ಡ್ರನ್' ಎಂಬ ಜೀವನಕ್ರಮ ಹೆಚ್ಚು ಜನಪ್ರಿಯವಾಗುತ್ತಿದೆ.

## ಕುಸಿತ ಒಳ್ಳೆಯದು!

ಚೀನಾ, ಜಪಾನ್, ರಷ್ಯಾ ಹಾಗೂ ಯುರೋಪಿನ ದೇಶಗಳಲ್ಲೂ 'ಟಿಎಫ್‌ಆರ್' ತೀವ್ರ ಕುಸಿತ ಕಂಡಿದೆ. ವಿಶ್ವಸಂಸ್ಥೆಯ ಸಂಶೋಧನಾ ತಂಡ ಮತ್ತು ಲ್ಯಾನ್ಸೆಟ್ ಸಂಶೋಧನಾ ಜರ್ನಲ್‌ನ ಅಧ್ಯಯನಗಳಲ್ಲಿ ಇನ್ನು ಹತ್ತು ವರ್ಷಗಳಲ್ಲಿ ಲಟ್‌ವಿಯ, ಸೆರ್ಬಿಯ, ಲಿಥುವೇನಿಯ, ಕ್ರೊವೇಶಿಯ, ಉಕ್ರೇನ್, ಬಲ್ಗೇರಿಯ, ಬೊಸ್ನಿಯ, ರೊಮೇನಿಯ ಮತ್ತು ಹರ್ಜಗೋವಿನ ದೇಶಗಳಲ್ಲಿ ಜನಸಂಖ್ಯೆ ತೀವ್ರವಾಗಿ ಕುಸಿಯಲಿದ್ದು, ಶತಮಾನದ ಕೊನೆಗೆ ಕುಸಿತದ ಪ್ರಮಾಣ ಶೇ 50ರಿಂದ 70ರಷ್ಟಾಗಲಿದೆ ಎಂಬ ಅಂಶ ಬೆಳಕಿಗೆ ಬಂದಿದೆ. ಇದು ಸ್ವಲ್ಪ ಮಟ್ಟಿನ ಆತಂಕಕ್ಕೆ ಕಾರಣವಾಗಿದ್ದರೂ 'ಚಿಂತಿಸುವ ಅಗತ್ಯವಿಲ್ಲ' ಎಂದಿರುವ ಸಮಾಜ ವಿಜ್ಞಾನಿಗಳು 'ಘಟನೆ ತನ್ನಿಂತಾನೇ ರಿವರ್ಸ್ ಆಗುತ್ತದೆ' ಎಂದು ಭರವಸೆ ನೀಡಿದ್ದಾರೆ. ಜಪಾನ್‌ನ ಉದಾಹರಣೆ ನೋಡಿ. ಅಲ್ಲಿರುವ ಈಗಿನ ಜನಸಂಖ್ಯೆಯಲ್ಲಿ ಅರ್ಧದಷ್ಟು ಕಡಿಮೆಯಾದರೆ, ನಿವೇಶನ, ಮನೆಗಳ ದರ ಕಡಿಮೆಯಾಗಿ ಉಳಿದವರು ರಾಜಧಾನಿ ಟೋಕಿಯೋದ ಮಧ್ಯ ಭಾಗದ ವಿಶಾಲ ಅಪಾರ್ಟ್‌ಮೆಂಟುಗಳ ದೊಡ್ಡ ದೊಡ್ಡ ಫ್ಲಾಟ್‌ಗಳಲ್ಲಿ ವಾಸಿಸುವ ಅವಕಾಶ, ಅನುಕೂಲ ಪಡೆದುಕೊಳ್ಳುತ್ತಾರೆ. ಆಗ, ವಾಸಿಸುವ ಸ್ಥಳಕ್ಕನುಗುಣವಾಗಿ ಹೆಚ್ಚಿನ ಮಕ್ಕಳನ್ನು ಪಡೆಯುವತ್ತ ಗಮನಹರಿಸುತ್ತಾರೆ ಎಂದು ವಾದಿಸುವ ಜಪಾನ್, 'ನಮ್ಮ ಜನರಿಗಿರುವ ಸಮಸ್ಯೆ ಜಾಗದ್ದು. ಪ್ರತಿ ಚ.ಕಿ.ಮೀ.ಗೆ 347 ಜನರಿದ್ದಾರೆ. ದೊಡ್ಡ ಜಾಗ ಸಿಕ್ಕಾಗ ಜನನ ಪ್ರಮಾಣ ತನ್ನಿಂತಾನೇ ವೃದ್ಧಿಸುತ್ತದೆ' ಎನ್ನುತ್ತದೆ.

**ಜನಸಂಖ್ಯಾ ನಿಯಂತ್ರಣಕ್ಕೆ ಸಂಬಂಧಿಸಿದ ಕೆಲವು ಕುತೂಹಲಕರ ಅಂಕಿಅಂಶಗಳನ್ನು ಗಮನಿಸಿ:**

- ಶಿಕ್ಷಣ ವಂಚಿತ ಸಮುದಾಯಗಳಲ್ಲಿ ಬಾಲ್ಯವಿವಾಹ ಹೆಚ್ಚಿನ ಪ್ರಮಾಣದಲ್ಲಿದೆ. ಬಿಹಾರದಲ್ಲಿ ಶೇ 43ರಷ್ಟು ಯುವತಿಯರ ಮದುವೆ ಅವರಿಗೆ 18 ವರ್ಷ ತುಂಬುವುದಕ್ಕೂ ಮುಂಚೆ ಆಗಿರುತ್ತದೆ.
- 1999ರಿಂದ 2006ರ ಅವಧಿಯಲ್ಲಿ ದೇಶದ 'ಟಿಎಫ್‌ಆರ್' 2.9ರಿಂದ 2.7ಕ್ಕೆ ಕುಸಿದಿತ್ತು. ಆಗ ಗರ್ಭನಿರೋಧಕಗಳ ಬಳಕೆಯಲ್ಲಿ ಶೇ 13.3 ಹೆಚ್ಚಳ ಕಂಡುಬಂದಿತ್ತು. 2006ರಿಂದ 2016ರ ಅವಧಿಯಲ್ಲಿ ನಮ್ಮ ದೇಶದ 'ಟಿಎಫ್‌ಆರ್' 2.7ರಿಂದ 2.2ಕ್ಕೆ, ಅಂದರೆ ರಿಪ್ಲೇಸ್‌ಮೆಂಟ್ ಲೆವೆಲ್‌ಗೆ ತೀರಾ ಹತ್ತಿರ ಬಂದಿತ್ತು. ಆಗ ಗರ್ಭನಿರೋಧಕಗಳ ಬಳಕ್ಕೆ ಶೇ 14.7ರಷ್ಟಿತ್ತು.
- ಅಧ್ಯಯನಗಳ ಪ್ರಕಾರ 15ರಿಂದ 49 ವಯಸ್ಸಿನ 3 ಕೋಟಿ ಮತ್ತು 15ರಿಂದ 24 ವಯಸ್ಸಿನ 1 ಕೋಟಿ ಹೆಣ್ಣುಮಕ್ಕಳಿಗೆ ಜನನ ನಿಯಂತ್ರಣ ಮಾಡಬೇಕೆಂಬ ಆಸೆ ಇದ್ದರೂ, ಅವರಿಗೆ ಗರ್ಭನಿರೋಧಕಗಳು ಸಿಕ್ಕಿರಲಿಲ್ಲ.
- ಸಂಶೋಧನೆ ಮತ್ತು ನೀತಿ ನಿರೂಪಣೆ ಸಂಸ್ಥೆ 'ಗುಟ್ಟಮ್‌ಚರ್'ನ ಅಧ್ಯಯನದಂತೆ, 2015ರಲ್ಲಿ ಭಾರತದಲ್ಲಿ ಒಂದೂವರೆ ಕೋಟಿ ಗರ್ಭಪಾತಗಳು ಸಂಭವಿಸಿದ್ದವು! ಅಂದರೆ, ಪ್ರತಿ ಸಾವಿರಕ್ಕೆ 47 ಗರ್ಭಪಾತಗಳಾಗಿದ್ದವು. ಆಗ 'ಟಿಎಫ್‌ಆರ್' ಶೇ 18.5 ರಷ್ಟು ಕುಸಿದಿತ್ತು.
- 2018–19ರಲ್ಲಿ ಹುಟ್ಟಿದ 2.6 ಕೋಟಿ ಮಕ್ಕಳಲ್ಲಿ 1.3 ಕೋಟಿ ಮಕ್ಕಳು ಬೇಡದ ಗರ್ಭಧಾರಣೆಯಿಂದ ಜನಿಸಿವೆ. ಇದುವರೆಗಿನ 5 NFHS ವರದಿಗಳಂತೆ, ನಲವತ್ತೂರು ಕೋಟಿ ಮಕ್ಕಳ ಪೈಕಿ 13.5 ಕೋಟಿ ಜನ ಬೇಡದ ಗರ್ಭಧಾರಣೆಗಳಿಂದ ಜನಿಸಿದ್ದಾರೆ.!



ಮನೆ ಮತ್ತು ಮನ: ಪ್ರಕೃತಿ ಮತ್ತು ಮನುಷ್ಯನ ಬದುಕು ಒಂದರೊಳಗೊಂದು ಕಲೆಸಿ ಹೋದಂತೆ ಕಾಣಿಸುವ ಇಂಡೋನೇಷ್ಯಾದ ಜಕಾರ್ತ

